ಬಸ್ಸು ಸೌಕರ್ಯಗಳು

1656 (2842); ಶ್ರೀ ಬಣಕಾರ್ ಯು. ಬಿ.

ಅ) ಹಿರೇಕೆರೂರು ತಾಲ್ಲೂಕು ಮುದ್ದಿನಕೊಪ್ಪ, ದಾಸನಕೊಪ್ಪ, ಜಾವಳ್ಳಿ, ಪರ್ವಲ್ ಸಿದ್ದಗೇರೆ, ಹಳಿಯಾಳ, ಕಣಿನೆದ್ದಗೇರಿ, ಪ್ರವಟಸಿದ್ದೇರಿ, ಯಡಗೋಡ ಗ್ರಾಮಗಳಿಗೆ ಪ್ರತಿ ದಿವಸ ಬಸ್ಸುಗಳು ಯಾವ ವೇಳೆಗೆ, ಯಾವ ಅನುಸೂಚಿಯ ಪ್ರಕಾರ ಸಂಚರಿಸುತ್ತಿವೆ;

ಆ) ಬಸ್ಸುಗಳನ್ನು ಪ್ರತಿ ದಿವಸ ವೇಳೆಗೆ ಸರಿಯಾಗಿ ಸಂಚರಿಸುವ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಹಾವೇರಿ ವಿಭಾಗದ ಹಿರೇಕೆರೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಮುದ್ದಿನಕೊಪ್ಪ, ದಾಸನಕೊಪ್ಪ, ಜಾವಳ್ಳಿ, ಪರ್ವಲ್, ಸಿದ್ದಗೇರೆ, ಹಳಿಯಾಳ, ಕಣಿನೆದ್ದಗೇರಿ, ಪ್ರವಟಸಿದ್ದೇರಿ, ಯಡಗೋಡ ಗ್ರಾಮಗಳಿಗೆ ಸಾರಿಗೆ ಸೌಲಭ್ಯ ಒದಗಿಸಿದ ವಿವರ ಕೆಳಗಿನಂತಿದೆ.

1) ಮುದ್ದಿನಕೊಪ್ಪ–ದಾಸನಕೊಪ್ಪ ಗ್ರಾಮಗಳಿಗೆ ಬ್ಯಾಡಗಿ ಘಟಕದ ಅನುಸೂಚಿ ಸಂಖ್ಯೆ 55–56 ರಲ್ಲಿ ಬೆಳಿಗ್ಗೆ 8.30 ಹಾಗೂ 15.30ಕ್ಕೆ ಸತರಿಗಳ ಕಾರ್ಯಾಚರಣೆಯಲ್ಲಿರುತ್ತವೆ.

2) ಜಾವಳ್ಳಿ–ಯಡಗೋಡ ಗ್ರಾಮಗಳಿಗೆ ಪ್ರಸ್ತುತ ಬಸ್ ಸೌಕರ್ಯ ಇರುವುದಿಲ್ಲ.

3) ಹಳಿಯಾಳ ಮತ್ತು ಕಣಿನೇದ್ದಗೇರಿ ಗ್ರಾಮಗಳಿಗೆ ಹಿರೇಕೆರೂರ ಘಟಕದಿಂದ ಅನುಸೂಚಿ ಸಂಖ್ಯೆ: 72–73ರಲ್ಲಿ 7.30 ಗಂಟೆಗೆ ಹಾಗೂ ಅನುಸೂಚಿ ಸಂಖ್ಯೆ 61 ರಲ್ಲಿ 17.15 ಗಂಟೆಗೆ ಕಾರ್ಯಾಚರಣೆ ಮಾಡ ಲಾಗುತ್ತಿದೆ. ಪ್ರವಟಸಿದ್ದೇರಿ, ಈ ಮಾರ್ಗದ ಪ್ರವಟಸಿದ್ದೇರಿ ಕ್ರಾಸ್‌ನಲ್ಲಿ ರಸ್ತೆ ಕಿರಿದಾಗಿದ್ದು ಹಾಗೂ ತುಂಗಾ ಎಡದಂಡೆ ನಾಲೆಯ ಮುಖ್ಯ ಚಾನಲ್ ಇದ್ದು ಹಾಗೂ ರಸ್ತೆ ಸ್ಥಿತಿ ಹಾಳಾಗಿರುತ್ತದೆ. ಪ್ರಯಾಣಿಕರ

ಸುರಕ್ಷತೆಗಾಗಿ ಸದರಿ ನಾಲೆಯ ಮುಖ್ಯ ಚಾನಲ್ ರಸ್ತೆ ಪಕ್ಕದಲ್ಲಿ ರಸ್ತೆ ತಡೆಗೋಡೆ ನಿರ್ಮಿಸಿ ರಸ್ತೆ ಅಗಲೀಕರಣ ಮಾಡಿದಲ್ಲಿ ಬಸ್ ಸೌಕರ್ಯ ಒದಗಿಸಲಾಗುವುದು.

ಆ) ಪ್ರಸ್ತುತ ಬಸ್ಸುಗಳು ಸಮಯಕ್ಕೆ ಸರಿಯಾಗಿ ಸಂಚರಿಸುತ್ತಿವೆ.

ಡಿಪೋಗಳ ಸಂಖ್ಯೆ

1657 (2843); ಶ್ರೀ ಬಣಕಾರ್ ಯು. ಬಿ.

ಅ) ರಾಜ್ಯದಲ್ಲಿರುವ ಸಾರಿಗೆ ಬಸ್ಸುಗಳು ಎಷ್ಟು;

ಆ) ಆಯಾ ಸಂಸ್ಥೆಯಲ್ಲಿ ಬರುವ ಘಟಕಗಳು ಯಾವುವು;

ಇ) ಪ್ರತಿ ಘಟಕವಾರು ಇರುವ ಅನುಸೂಚಿಗಳ ಸಂಖ್ಯೆ ಎಷ್ಟು; ಬಸ್ಸುಗಳ ಸಂಖ್ಯೆ ಎಷ್ಟು;

ಈ) 2013–14ನೇ ಸಾಲಿನಲ್ಲಿ ಪ್ರತಿ ಘಟಕ ಗಳಿಸಿದ ಲಾಭ ಹಾಗೂ ಹಾನಿ ಎಷ್ಟು?

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ರಾಜ್ಯದಲ್ಲಿರುವ ಸಾರಿಗೆ ಬಸ್ಸುಗಳ ವಿವರ ಕೆಳಕಂಡಂತಿದೆ.

ಸಂಸ್ಥೆ	ಬಸ್ಸುಗಳ ಸಂಖ್ಯೆ
ಕರಾರಸಾನಿಗಮ	8333
ಬೆಂಮಸಾಸಂಸ್ಥೆ	6737
ವಾಕರಸಾಸಂಸ್ಥೆ	4816
ಈಕರಸಾಸಂಸ್ಥೆ	4428